ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ವಿವಿಧ ವೃಂದಗಳ ಒಟ್ಟು 3761 ಹುದ್ದೆಗಳು ಖಾಲಿ ಇವೆ.

ಆ) ಹೌದು. ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಮುಂಬಡ್ತಿಗೆ ಮೀಸಲಾದ ಹುದ್ದೆಗಳನ್ನು ಅರ್ಹ ಸಿಬ್ಬಂದಿಗೆ ಬಡ್ತಿ ನೀಡುವ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಇ) ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ಆರ್ಥಿಕ ಮಿತವ್ಯಯ ಆದೇಶದ ನಿರ್ಬಂಧ ಇರುತ್ತದೆ. ಈ ಆದೇಶವನ್ನು ಸಡಿಲಿಸಿ ಮುಂಬಡ್ತಿ ನೀಡಲು ಕ್ರಮ ವಹಿಸಲಾಗುವುದು.

2684 (3279) ಶ್ರೀ ಓ.ಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಜಿಲ್ಲೆಯಲ್ಲಿರುವ ಮೆಟ್ರಿಕ್–ಪೂರ್ವ ವಿದ್ಯಾರ್ಥಿ ವಿದ್ಯಾರ್ಥಿನಿ ನಿಲಯಗಳ ಸಂಖ್ಯೆ ಎಷ್ಟು;

ಆ) ಅವುಗಳ ನಿರ್ವಹಣೆಗಾಗಿ 2003–04 ಮತ್ತು 2004–05ನೇ ಸಾಲಿನಲ್ಲಿ ಖರ್ಚು ಮಾಡಿದ ಹಣದ ಮೊತ್ತ ಎಷ್ಟು;

ಇ) ಹಿಂದುಳಿದ ವರ್ಗಗಳ ವಿವಿಧ ವರ್ಗಗಳ ವಸತಿನಿಲಯಗಳನ್ನು ಬೇಡಿಕೆಗನುಗುಣವಾಗಿ ಹೆಚ್ಚಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹಾವೇರಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ 39 ಮೆಟ್ರಿಕ್–ಪೂರ್ವ ವಿದ್ಯಾರ್ಥಿ ವಿದ್ಯಾರ್ಥಿನಿ ನಿಲಯಗಳಿರುತ್ತವೆ.

ಆ) ಈ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ 2003–04 ಮತ್ತು 2004–05ನೇ ಸಾಲಿನಲ್ಲಿ ಖರ್ಚು ಮಾಡಿದ ಹಣ ಈ ಕೆಳಕಂಡಂತಿರುತ್ತವೆ.

(ರೂ.ಲಕ್ಷಗಳಲ್ಲಿ)

ವರ್ಷ	ಖರ್ಚಾದ ಹಣ
2003–04	192.53
2004–05	249.88

ಇ) ಮುಂದಿನ ಸಾಲುಗಳಲ್ಲಿ ವಿದ್ಯಾರ್ಥಿನಿಲಯಗಳ ಪ್ರಾರಂಭಕ್ಕಾಗಿ ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನದ ಮೇರೆಗೆ ಬೇಡಿಕೆಯನುಸಾರ ಹಂತ ಹಂತವಾಗಿ ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ ಕ್ರಮವಹಿಸಲಾಗುವುದು.

2685 (2300) ಶ್ರೀ ಪಾಪರೆಡ್ಡಿ ಎ. (ರಾಯಚೂರು) :– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಮತಕ್ಷೇತ್ರದಲ್ಲಿ ಜಾನುವಾರು ಆರೋಗ್ಯ ಕೇಂದ್ರಗಳು ಎಷ್ಟಿವೆ;

ಆ) ಈ ಇಲಾಖೆಗೆ 2004–05ರಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಇ) ಯಾವ ಯಾವ ಯೋಜನೆಗಳಿಗಾಗಿ ಹಣ ಬಿಡುಗಡೆ ಮಾಡಲಾಗಿದೆ;

ಈ) ಈ ಕ್ಷೇತ್ರವಲ್ಲಿ ಎಷ್ಟು ಜನ ವೈದ್ಯರಿದ್ದಾರೆ ಸಿಬ್ಬಂದಿ ವರ್ಗ ಎಷ್ಟಿದೆ; ನೇಮಕವಾಗಿರುವವರೆಷ್ಟು ಹಾಗೂ ಈಗ ಕರ್ತವ್ಯದಲ್ಲಿರುವರು ಎಷ್ಟು;

ಉ) ಪಶುಸಂಗೋಪನೆ ಇಲಾಖೆಯಿಂದ ಜಾನುವಾರುಗಳಿಗಾಗಿ ರೈತರಿಗೆ ಕೊಡುವ ಸೌಲಭ್ಯಗಳು ಯಾವುವು;

ಊ) ಇದುವರೆಗೆ ಯಾವ ಫಲಾನುಭವಿಗಳಿಗೆ ಸೌಲಭ್ಯಗಳು ನೀಡಲಾಗಿದೆ;

ಋ) ಪಶು ಪ್ರಾಣಿಗಳ ಚಿಕಿತ್ಸೆಗಾಗಿ ನೀಡುವ ಔಷಧಿಗಳನ್ನು ನೀಡದೇ ಬಂದಂತಹ ರೈತರಿಗೆ ಹೊರಗಿನಿಂದ ತರಿಸುವಂತೆ ತೊಂದರೆ ನೀಡುತ್ತಿರುವುದನ್ನು ತಪ್ಪಿಸಲು ತೆಗೆದುಕೊಂಡ ಕ್ರಮಗಳೇನು;

ಋ) ಬಹಳ ವರ್ಷಗಳಿಂದ ಇಲ್ಲಿಯೇ ಇರುವ ಅಧಿಕಾರಿಗಳು ಬೇನಾಮಿ ಹೆಸರಿನಲ್ಲಿ ಔಷಧಿ ಇನ್ನಿತರ ಸರಕಾರದ ಸೌಲಭ್ಯಗಳನ್ನು ಮಾಡಿಕೊಂಡು ರೈತರಿಗೆ ಅನ್ಯಾಯವಾಗುತ್ತಿರುವುದರ ಬಗ್ಗೆ ಕ್ರಮ ಜರುಗಿಸಲಾಗುವುದೇ?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ರಾಯಚೂರು ಮತಕ್ಷೇತ್ರದಲ್ಲಿ ಒಟ್ಟು 8 ವಿವಿಧ ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ವಿವರ ಈ ಕೆಳಕಂಡಂತಿದೆ.

ಸಂಸ್ಥೆಗಳು	ಸಂಖ್ಯೆ
ಪಶು ಆಸ್ಪತ್ರೆ	1
ಪಶು ಚಿಕಿತ್ಸಾಲಯ	2
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	4
ಸಂಚಾರಿ ಪಶು ಚಿಕಿತ್ಸಾಲಯ	1
ಒಟ್ಟು	**8**